ಜವಳಿ ಪಾರ್ಕ್ ನಿರ್ಮಿಸುವುದು

937 (1627); ಶ್ರೀ ಗುರು ಪಾಟೀಲ ಶಿರವಾಳ (ಶಹಾಪುರ)

ಅ) ಯಾದಗಿರಿಯಲ್ಲಿ ಜವಳಿ ಪಾರ್ಕ್ ನಿರ್ಮಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಜವಳಿ ಪಾರ್ಕ್‌ಯೋಜನೆಯ ಸಮಗ್ರ ಮಾಹಿತಿ/ವಿವರ ನೀಡುವುದು;

ಇ) ಈ ಪಾರ್ಕ್ ಯಾವಾಗ ಪ್ರಾರಂಭವಾಗುವುದು? (ವಿವರಗಳನ್ನು ನೀಡುವುದು)

ಶ್ರೀ ಬಾಬುರಾವ್ ಚಿಂಚನಸೂರ್ (ಜವಳಿ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು)

ಅ) ಬಂದಿದೆ.

ಆ)

ನೂತನ ಜವಳಿ ನೀತಿ 2013–18ರಡಿ ಜವಳಿ ಪಾರ್ಕ್ ಸ್ಥಾಪಿಸುವ ಸಮಗ್ರ ಮಾಹಿತಿ ಕೆಳಗಿನಂತಿದೆ.

1. ಮಾನದಂಡ:
   - ಜವಳಿ ಉದ್ದಿಮೆದಾರರು ಕಂಪನಿ ಆಕ್ಟ್ ಅನ್ವಯ ಎಸ್.ಪಿ.ವಿ. ರಚಿಸಬೇಕು.
   - ಕಂಪನಿ ಹೆಸರಿನಲ್ಲಿ ಕನಿಷ್ಟ 15 ಎಕರೆ ಕೆ.ಐ.ಎ.ಡಿ.ಬಿ ಅಥವಾ ಕೆ.ಎಸ್.ಎಸ್.ಐ.ಡಿ.ಸಿ ಜಮೀನು ಅಥವಾ ಕೈಗಾರಿಕಾ ಭೂಮಿಯನ್ನು ಹೊಂದಿರಬೇಕು.
   - ಎಸ್‌ಪಿವಿ ರಚಿಸಲು ಕನಿಷ್ಠ 5 ಉದ್ಯಮಶೀಲ ಸದಸ್ಯರಿರಬೇಕು.
2. ಪ್ರಯೋಜನಗಳು:
   - ವಲಯ 1 ರಲ್ಲಿ ನಿರ್ಮಿಸಲಾಗುವ ಜವಳಿ ಪಾರ್ಕ್‌ನ ಯೋಜನಾ ವೆಚ್ಚದ ಶೇ.40 ಅಥವಾ ಗರಿಷ್ಟ ₹ 20.00

ಕೋಟಿಗಳು ಮತ್ತು ಕೇಂದ್ರ ಸರ್ಕಾರದಿಂದ ಅನುಮೋದಿತ ಜವಳಿ ಪಾರ್ಕ್‌ಗೆ ಯೋಜನಾ ವೆಚ್ಚದ ಶೇ.10 ಅಥವಾ ₹ 10.00 ಕೋಟಿಗಳನ್ನು ಮೂಲ ಸೌಕರ್ಯ ಅಭಿವೃದ್ಧಿಗೆ ನೀಡಲಾಗುವುದು.

- ವಲಯ 2 ರಲ್ಲಿ ನಿರ್ಮಿಸಲಾಗುವ ಜವಳಿ ಪಾರ್ಕ್‌ನ ಯೋಜನಾ ವೆಚ್ಚದ ಶೇ.20 ಅಥವಾ ಗರಿಷ್ಟ ₹ 15.00 ಕೋಟಿಗಳು ಮತ್ತು ಕೇಂದ್ರ ಸರ್ಕಾರದಿಂದ ಅನುಮೋದಿತ ಜವಳಿ ಪಾರ್ಕ್‌ಗೆ ಯೋಜನಾ ವೆಚ್ಚ ಶೇ.10 ಅಥವಾ ₹ 10.00 ಕೋಟಿಗಳನ್ನು ಮೂಲ ಸೌಕರ್ಯ ಅಭಿವೃದ್ಧಿಗೆ ನೀಡಲಾಗುವುದು.
- ಹಿಂದುಳಿದ ಪ್ರದೇಶಗಳಲ್ಲಿ ನಿರ್ದಿಷ್ಟ ಜವಳಿ ವಲಯಗಳು: ನಿರ್ದಿಷ್ಟ ಜವಳಿ ವಲಯಗಳಲ್ಲಿ ಸಾಮಾನ್ಯ ಮೂಲಭೂತ ಸೌಕರ್ಯಗಳಿಗಾಗಿ, ಯೋಜನಾ ವೆಚ್ಚದ ಶೇ.40% ಅಥವಾ ಗರಿಷ್ಟ ₹ 25 ಕೋಟಿ ನೀಡಲಾಗುವುದು.
- ಪಾರ್ಕ್‌ನಲ್ಲಿ ಸ್ಥಾಪಿಸುವ ಘಟಕಗಳಿಗೆ ಸಾಲಾಧಾರಿತ ಬಂಡವಾಳ ಸಹಾಯಧನ, ಬಡ್ಡಿ ಸಹಾಯಧನ, ವಿಶೇಷ ಮತ್ತು ಹೆಚ್ಚುವರಿ ಸಹಾಯಧನ, ಪ್ರವೇಶ ತೆರಿಗೆ ಮರು ಪಾವತಿ, ಮುದ್ರಾಂಕ ಶುಲ್ಕ ಮರು ಪಾವತಿ ಮತ್ತು ವಿದ್ಯುತ್ ಸಹಾಯಧನ ನೀಡಲು ಅವಕಾಶವಿರುತ್ತದೆ.

3. ಅನುಕೂಲಗಳು:

- ಒಂದೇ ಪ್ರದೇಶದಲ್ಲಿ ಕ್ಲಸ್ಟರ್ ಮಾದರಿಯ ಜವಳಿ ಕೈಗಾರಿಕೆಗಳ ಸ್ಥಾಪನೆ.
- ಸಮಗ್ರ ಸರಣಿ ಮೌಲ್ಯ ಜವಳಿ ಉತ್ಪಾದನಾ ಚಟುವಟಿಕೆಗಳು.
- ನೇರ ಉದ್ಯೋಗ ಅವಕಾಶಗಳ ಲಭ್ಯತೆ.
- ಸಾಮಾನ್ಯ ಮೂಲಭೂತ ಸೌಲಭ್ಯಗಳ ಅಭಿವೃದ್ಧಿ.

- ಬೃಹತ್ ಪ್ರಮಾಣದ ಕೈಗಾರಿಕೆಗಳ ಸ್ಥಾಪನೆ.
- ಸಣ್ಣ ಮತ್ತು ಅತೀ ಸಣ್ಣ ಪೂರಕ ಜವಳಿ ಘಟಕಗಳಿಗೆ ಅನುಕೂಲಕರ ವಾತಾವರಣ.
- ಜವಳಿ ಮತ್ತು ಸಿದ್ಧ ಉಡುಪು ಘಟಕಗಳ ಭೌಗೋಳಿಕವಾಗಿ ವಿಸ್ತರಿಸುವುದು.
- ಯಾದಗಿರಿಯಲ್ಲಿ ಜವಳಿ ಪಾರ್ಕ್ ಉದ್ದೇಶಕ್ಕಾಗಿ ಕೆ.ಐ.ಎ.ಡಿ.ಬಿ ಯಿಂದ 1000 ಎಕರೆ ಜಮೀನನ್ನು ಮೀಸಲಿರಿಸಿದೆ.

ಇ)

- ದಿನಾಂಕ: 21.11.2014 ರಂದು ಸರ್ಕಾರದ ಮಟ್ಟದಲ್ಲಿ ಬೃಹತ್ ಕೈಗಾರಿಕೆಗಳ ಹೂಡಿಕೆದಾರರ ಸಭೆಯನ್ನು ಕರೆದು ಯಾದಗಿರಿ ಕೈಗಾರಿಕಾ ಪ್ರದೇಶದಲ್ಲಿ ಸ್ಥಾಪಿಸುವ ಘಟಕ/ಪಾರ್ಕ್‌ಗಳಿಗೆ ನೂತನ ಜವಳಿ ನೀತಿ 2013–18 ರಡಿ ಹೂಡಿಕೆದಾರರಿಗೆ ಇರುವ ಪ್ರೋತ್ಸಾಹನಗಳ ತಿಳುವಳಿಕೆ ನೀಡಲಾಗಿದೆ.
- ಬೃಹತ್ ಬಂಡವಾಳ ಹೂಡಿಕೆದಾರರನ್ನು ಗುರುತಿಸಲಾಗುತ್ತಿದೆ.
- ಉದ್ಯಮಶೀಲರನ್ನು ಗುರುತಿಸಿ ಎಸ್.ಪಿ.ವಿ ರಚನೆ ಪ್ರಗತಿಯಲ್ಲಿದೆ.
- ಕೈಗಾರಿಕೆಗೆ ಬೇಕಾದ ಜಮೀನನ್ನು ಕೆ.ಐ.ಎ.ಡಿ.ಬಿ ಯಿಂದ ಸ್ವಾಧೀನ ಪಡೆದು ಅಭಿವೃದ್ಧಿ ಪಡಿಸುವ ಕೆಲಸ ಪ್ರಗತಿಯಲ್ಲಿದೆ.

ಕ್ರೀಡಾಂಗಣವನ್ನು ಮಂಜೂರು ಮಾಡುವುದು

938 (447); **ಶ್ರೀ ಗುರುಪಾದಗೌಡ ಸಂಗನಗೌಡ ಪಾಟೀಲ (ರೋಣ**

ಅ) ಕ್ರೀಡಾಂಗಣವನ್ನು ಮಂಜೂರು ಮಾಡಲು ಇರುವ ಸರ್ಕಾರದ ಮಾನದಂಡಗಳೇನು?